ಆದಿಕವಿ ಶ್ರೀ ಮಹರ್ಷಿ
ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ADIKAVI SRI MAHARSHI
VALMIKI UNIVERSITY, RAICHUR

ಕೃಷ್ಣ-ತುಂಗ ಆವರಣ, ಮಂತ್ರಾಲಯ ರಸ್ತೆ (ಎನ್.ಹೆಚ್. 167), ಯರಗೇರಾ-584133, ರಾಯಚೂರು, ಕರ್ನಾಟಕ
ಆಡಳಿತ ವಿಭಾಗ E-mail: registrarrur@gmail.com

ಸಂ: ಆ.ಶ್ರೀ.ಮ.ವಾ.ವಿ.ರಾ/ಆಡಳಿತ/ಸಿ.ಸ/2025-26/ 539 ದಿನಾಂಕ: 22.07.2025

ಇವರಿಗೆ,
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಎಲ್ಲಾ ಗೌರವಾನ್ವಿತ
ಸಿಂಡಿಕೇಟ್ ಸದಸ್ಯರು.

ಮಾನ್ಯರೇ,

ವಿಷಯ: ದಿನಾಂಕ 15.07.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳುಹಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 15.07.2025 ರಂದು ಮಂಗಳವಾರ ಮದ್ಯಾಹ್ನ 03 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ"ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು.

**ಲಗತ್ತು:**
ಸಿಂಡಿಕೇಟ್ ಸಭೆಯ ನಡಾವಳಿ.

**ಪ್ರತಿಗಳನ್ನು ಅವಗಾಹನೆ ಹಾಗೂ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ :**
1) ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
2) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಕುಲಸಚಿವರು (ಮೌಲ್ಯಮಾಪನ), ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
4) ಹಣಕಾಸು ಅಧಿಕಾರಿಗಳು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
5) ಗ್ರಂಥಪಾಲಕರು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
6) ನಿರ್ದೇಶಕರು ಕಾಲೇಜು ಅಭಿವೃದ್ಧಿ ಮಂಡಳಿ, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
7) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
8) ಸಂಯೋಜಕರು ಗಣಕ ಕೇಂದ್ರ, ಇವರಿಗೆ ಜಾಲತಾಣದಲ್ಲಿ ಅಳವಡಿಸಲು ತಿಳಿಸಲಾಗಿದೆ.
9) ಕುಲಪತಿಗಳ ಆಪ್ತಕಾರ್ಯದರ್ಶಿಗಳು/ ಕುಲಸಚಿವರ ಆಪ್ತಸಹಾಯಕರು, ಆ.ಶ್ರೀ.ಮ.ವಾ. ವಿಶ್ವವಿದ್ಯಾನಿಲಯ, ರಾಯಚೂರು.
10) ಕಚೇರಿ ಕಡತ.

DR/Adm
for translation

**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು**

**ದಿನಾಂಕ 15.07.2025 ರಂದು ಮಂಗಳವಾರ ಮದ್ಯಾಹ್ನ 03 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ"ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು :**

| | |
|---|---|
| 1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು | – ಅಧ್ಯಕ್ಷರು |
| 2) ಡಾ. ಕೆ. ವೆಂಕಟೇಶ್, ಡೀನರು: ಸಮಾಜ ವಿಜ್ಞಾನ ನಿಕಾಯ | – ಸದಸ್ಯರು |
| 3) ಡಾ. ನಾಗರತ್ನ ಎಂ. ನಾಯ್ಕ್ | – ಸದಸ್ಯರು |
| 4) ಶ್ರೀ ಶ್ರೇಯಂಕ್ ಹೆಚ್. ವಿ. | – ಸದಸ್ಯರು |
| 5) ಡಾ. ಮೀನಾಕ್ಷಿ ಖಂಡಿಮಠ | – ಸದಸ್ಯರು |
| 6) ಶ್ರೀ ಡಿ.ಆರ್. ಚೆನ್ನ | – ಸದಸ್ಯರು |
| 7) ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ | – ಸದಸ್ಯರು |
| 8) ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ | – ಸದಸ್ಯರು |
| 9) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ | – ಸದಸ್ಯರು |
| 10) ಶ್ರೀ ಚಂದ್ರಶೇಖರ ಲಿಂಗದಳ್ಳಿ | – ಸದಸ್ಯರು |
| 11) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) | – ಸದಸ್ಯರು |
| 12) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) | – ಸದಸ್ಯರು |
| 13) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) | – ಸದಸ್ಯ ಕಾರ್ಯದರ್ಶಿಗಳು |

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಾಗಿ ನೇಮಕವಾದ ಡಾ. ಶಿವಾನಂದ ಕೆಳಗಿನಮನಿ ಗೌರವಾನ್ವಿತ ಕುಲಪತಿಗಳು, ಇವರಿಗೆ ಹಾಗೂ ನೂತನ ಕುಲಸಚಿವ (ಆಡಳಿತ) ರಾಗಿ ನೇಮಕವಾದ ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) ಅಧಿಕಾರಿಗಳು ಹಾಗೂ ನೂತನ ಸಿಂಡಿಕೇಟ್ ಸದಸ್ಯರಾಗಿ ಸರ್ಕಾರದಿಂದ ನಾಮನಿರ್ದೇಶನಗೊಂಡ ಶ್ರೀ ಚಂದ್ರಶೇಖರ ಲಿಂಗದಳ್ಳಿ ಇವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಅಧಿಕಾರಿಗಳು ಹಾಗೂ ಸದಸ್ಯರು ಸನ್ಮಾನಿಸಿ ಗೌರವಿಸಿದರು. ನಂತರ ಮಾನ್ಯ ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನ್ನು ಮತ್ತು ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತಾ ಸಭಾಧ್ಯಕ್ಷರ ಅನುಮತಿ ಮೇರೆಗೆ ಸಭೆಯನ್ನು ಪ್ರಾರಂಭಿಸಿದರು. ಸಭೆಯ ಕಾರ್ಯಸೂಚಿಯಂತೆ ವಿಷಯಗಳನ್ನು ಒಂದೊಂದಾಗಿ ಈ ಕೆಳಗಿನಂತೆ ಚರ್ಚಿಸಿ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**ವಿಷಯ ಕ್ರಮಾಂಕ (01)**

ದಿನಾಂಕ 31.05.2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:** ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ (02)**

ದಿನಾಂಕ 10.06.2025 ರಂದು ಹಾಗೂ 12.06.2025 ರಂದು ನಡೆದ ಸಿಂಡಿಕೇಟ್ ವಿಶೇಷ ಸಭೆಗಳ ನಡವಳಿಗಳನ್ನು ದೃಢೀಕರಿಸುವ ಕುರಿತು.

... 2

<u>ಸಿಂಡಿಕೇಟ್ ಸಭೆಯ ನಿರ್ಣಯ:</u> ದೃಢೀಕರಿಸಲಾಯಿತು.

**ವಿಷಯ ಕ್ರಮಾಂಕ (03)**

2025-26ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸಂಲಗ್ನತೆ ಪ್ರಕ್ರಿಯೆಯಲ್ಲಿ 45ಕ್ಕಿಂತ ಕಡಿಮೆ ಅಂಕ ಪಡೆದ 27 ಕಾಲೇಜುಗಳಿಗೆ ನೋಟಿಸ್ ನೀಡಲಾಗಿದ್ದು ಸದರಿ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿ (LIC) ಮರು ಭೇಟಿ ನೀಡುವುದು ಹಾಗೂ ಸ್ಥಳೀಯ ವಿಚಾರಣಾ ಸಮಿತಿ (LIC) ಶಿಫಾರಸ್ಸಿಗಳಿಗನುಸಾರ ಕಾಲೇಜುಗಳಿಗೆ ಸಂಲಗ್ನತೆಯನ್ನು ನೀಡುವ ಕುರಿತು.

<u>**ಸಿಂಡಿಕೇಟ್ ಸಭೆಯ ನಿರ್ಣಯ:**</u>

<u>**ಪ್ರಸ್ತಾವನೆ:**</u>

2025-26ನೇ ಸಾಲಿನ ಕಾಲೇಜುಗಳ ಸಂಲಗ್ನತೆಗಾಗಿ LIC ಸಮಿತಿಯು ದಿನಾಂಕ: 09.12.2024 ರಿಂದ 25.12.2024ರ ವರೆಗೆ ಭೇಟಿ ನೀಡಿದಾಗ ಸರ್ಕಾರದ ನಿಯಮಾನುಸಾರ 45 ಕ್ಕಿಂತ ಕಡಿಮೆ ಅಂಕಗಳಿಸಿದ ಪದವಿ ಕಾಲೇಜುಗಳಿಗೆ ಒಂದು ಅವಕಾಶ ನೀಡಿ 27 ಕಾಲೇಜುಗಳಿಗೆ ಮರು LIC ಮಾಡಿಸಲು ಆಸಕ್ತ ಕಾಲೇಜುಗಳು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿತ್ತು. ಅದರಲ್ಲಿ 8 ಕಾಲೇಜುಗಳು ವಿಶ್ವವಿದ್ಯಾನಿಲಯವು ಸೂಚಿಸಿದ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಿದ್ದು ಉಳಿದ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾನಿಲಯವು ವಿಧಿಸಿದ ಶುಲ್ಕವು ಹೆಚ್ಚುವರಿಯಾಗಿದ್ದು ಅದನ್ನು ಕಡಿಮೆಗೊಳಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದವು.

ಸದರಿ ವಿಷಯದ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನ ತೆಗೆದುಕೊಂಡಿತು. 2025-26ನೇ ಶೈಕ್ಷಣಿಕ ಸಾಲಿನ ಪದವಿ ಕಾಲೇಜುಗಳ ಸಂಲಗ್ನತೆ ಪ್ರಕ್ರಿಯೆಯಲ್ಲಿ 45 ಕ್ಕಿಂತ ಕಡಿಮೆ ಅಂಕ ಗಳಿಸಿದ 27 ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿ (LIC) ಮರು ಭೇಟಿ ಶುಲ್ಕ ಈ ಹಿಂದೆ ನಿಗದಿಪಡಿಸಿದಂತೆ ಪ್ರತಿ ಕಾಲೇಜಿಗೆ ರೂ. 36500 ರ ಬದಲಾಗಿ ರೂ. 15000 ಗಳಂತೆ ಕಡಿಮೆಗೊಳಿಸಿ ವಿಶೇಷ ಪ್ರಕರಣವೆಂದು ಭಾವಿಸಿ ಈ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ನಿಗದಿಪಡಿಸಿ ಸುತ್ತೋಲೆ ಹೊರಡಿಸಿದ ಐದು ದಿನಗಳ ಒಳಗೆ ವಿಶ್ವವಿದ್ಯಾನಿಲಯಕ್ಕೆ ಪಾವತಿಸಿದ ನಂತರ (LIC) ಮರು ಭೇಟಿಯನ್ನು ಕೈಗೊಳ್ಳಲಾಗುವುದು ಎಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಮುಂದುವರೆದು, ಸದರಿ ಮರು ಭೇಟಿಯ ನಂತರ 45 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಕಾಲೇಜುಗಳಿಗೆ ಮಾತ್ರ ಸಂಲಗ್ನತೆಯನ್ನು ನೀಡುವುದು ಎಂದು ಮತ್ತು 45 ಕ್ಕಿಂತ ಕಡಿಮೆ ಪಡೆದ ಕಾಲೇಜುಗಳಿಗೆ ಸಂಲಗ್ನತೆಯನ್ನು ರದ್ದುಗೊಳಿಸಿ ಅಂತಹ ಕಾಲೇಜುಗಳಲ್ಲಿ ಈಗಾಗಲೇ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳನ್ನು ಇತರೆ ಸಂಯೋಜಿತ ಕಾಲೇಜುಗಳಿಗೆ ವರ್ಗಾಯಿಸಲು ತೀರ್ಮಾನಿಸಲಾಯಿತು. ಈಗಾಗಲೇ LIC ಮರು ಭೇಟಿ ಶುಲ್ಕ ರೂ. 36500 ನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿದ ಕಾಲೇಜುಗಳಿಗೆ ವ್ಯತ್ಯಾಸದ ಹಣವನ್ನು ಮರುಪಾವತಿಸಲಾಗುವುದು ಎಂದು ನಿರ್ಣಯಿಸಲಾಯಿತು.

**ವಿಷಯ ಕ್ರಮಾಂಕ (04)**

ವಿಶ್ವವಿದ್ಯಾನಿಲಯ ಕಾರ್ಯಸೌಧ ಕಟ್ಟಡದ ಎರಡನೇ ಮಹಡಿ (ಈಗಿರುವ ಸಿಂಡಿಕೇಟ್ ಸಭಾಂಗಣ ಮತ್ತು ಡಿಜಿಟಲ್ ಇವ್ಯಾಲುವೇಶನ್ ಕೊಠಡಿಗಳ ಮೇಲೆ) ಕಟ್ಟಡ ನಿರ್ಮಿಸುವ ಕುರಿತು ಮತ್ತು ಸದರಿ ಕಾಮಗಾರಿಯನ್ನು 4G ವಿನಾಯತಿ ಇರುವ ಏಜೆನ್ಸಿಗೆ ನೀಡುವ ಕುರಿತು ಚರ್ಚೆ.

... 3

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಚರ್ಚಿಸಲಾಗಿ ಸದರಿ ಕಟ್ಟಡ ನಿರ್ಮಿಸಲು ಅನುಮೋದಿಸಲಾಯಿತು. ಮುಂದುವರೆದು, ಸದರಿ ಕಟ್ಟಡ ಕಾಮಗಾರಿಗೆ ತಗುಲುವ ಅಂದಾಜು ವೆಚ್ಚ ರೂ. 135 ಲಕ್ಷಗಳನ್ನು ಆರ್ಥಿಕ ಲಭ್ಯತೆಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಒಪ್ಪಲಾಯಿತು.

ಸದರಿ ಕಾಮಗಾರಿಯನ್ನು 4ಜಿ ವಿನಾಯಿತಿ ಇರುವ ಏಜೆನ್ಸಿಯ ಬದಲಾಗಿ ಸರ್ಕಾರದ ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಕರೆಯುವ ಮೂಲಕ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (05)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಹಿಳಾ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರಿಗೆ Rest Room ಕಟ್ಟಡವನ್ನು ನಿರ್ಮಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಚರ್ಚಿಸಲಾಗಿ Rest Room ಕಟ್ಟಡವು ವಿದ್ಯಾರ್ಥಿನಿಯರ ಹಾಗೂ ಮಹಿಳಾ ಸಿಬ್ಬಂದಿಗಳ ಮನವಿಯಂತೆ ಅಗತ್ಯ ಮತ್ತು ತುರ್ತಾಗಿ ಬೇಕಾಗಿರುವುದರಿಂದ ಸದರಿ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ. 40-50 ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು ಆರ್ಥಿಕ ಲಭ್ಯತೆಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸದರಿ ಕಾಮಗಾರಿಯನ್ನು 4ಜಿ ವಿನಾಯಿತಿ ಇರುವ ಏಜೆನ್ಸಿಯ ಬದಲಾಗಿ ಸರ್ಕಾರದ ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಕರೆಯುವ ಮೂಲಕ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (06)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ವಾಹನಗಳ ನಿಲುಗಡೆಗೆ 4 ಪ್ರತ್ಯೇಕ Vehicle Parking Shed ನಿರ್ಮಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ**

ಈ ವಿಷಯದ ಕುರಿತು ಚರ್ಚಿಸಲಾಗಿ ವಾಹನಗಳ ನಿಲುಗಡೆಗೆ 4 ಪ್ರತ್ಯೇಕ Vehicle Parking Shed ನಿರ್ಮಿಸಲು ಅನುಮೋದಿಸಲಾಯಿತು. ಮುಂದುವರೆದು, ಸದರಿ ಕಾಮಗಾರಿಗೆ ಅಂದಾಜು ರೂ. 40

ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು ಆರ್ಥಿಕ ಲಭ್ಯತೆಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

**ವಿಷಯ ಕ್ರಮಾಂಕ (07)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ಅತಿಥಿ ಗೃಹ (Guest House) ಕಟ್ಟಡ ನಿರ್ಮಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಚರ್ಚಿಸಲಾಗಿ ಸದರಿ ಕಟ್ಟಡ ನಿರ್ಮಿಸಲು ಅನುಮೋದಿಸಲಾಯಿತು. ಮುಂದುವರೆದು, ಸದರಿ ಅತಿಥಿ ಗೃಹ (Guest House) ಕಟ್ಟಡ ಕಾಮಗಾರಿಗೆ ತಗುಲುವ ಅಂದಾಜು ರೂ. 90 ಲಕ್ಷಗಳ ವೆಚ್ಚವನ್ನು ಆರ್ಥಿಕ ಲಭ್ಯತೆಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸದರಿ ಕಾಮಗಾರಿಯನ್ನು 4ಜಿ ವಿನಾಯಿತಿ ಇರುವ ಏಜೆನ್ಸಿಯ ಬದಲಾಗಿ ಸರ್ಕಾರದ ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಕರೆಯುವ ಮೂಲಕ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (08)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ (Primary Health Center) ಕಟ್ಟಡ ನಿರ್ಮಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಚರ್ಚಿಸಲಾಗಿ ಸದರಿ ಕಟ್ಟಡ ನಿರ್ಮಿಸಲು ಅನುಮೋದಿಸಲಾಯಿತು. ಮುಂದುವರೆದು, ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರ (Primary Health Center) ಕಟ್ಟಡ ಕಾಮಗಾರಿಗೆ ತಗುಲುವ ಅಂದಾಜು ರೂ. 50 ಲಕ್ಷಗಳ ವೆಚ್ಚವನ್ನು ಆರ್ಥಿಕ ಲಭ್ಯತೆಗೆ ಒಳಪಟ್ಟು

ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸದರಿ ಕಾಮಗಾರಿಯನ್ನು 4ಜಿ ವಿನಾಯಿತಿ ಇರುವ ಏಜೆನ್ಸಿಯ ಬದಲಾಗಿ ಸರ್ಕಾರದ ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಕರೆಯುವ ಮೂಲಕ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (09)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ಉಪಹಾರ ಗೃಹ (Cafeteria) ಕಟ್ಟಡ ನಿರ್ಮಿಸುವ ಕುರಿತು.

... 5

**ಸಿಂಡಿಕೇಟ್ ಸಭೆಯ ನಿರ್ಣಯ:**

**ಪ್ರಸ್ತಾವನೆ:**

ಕಾರ್ಯನಿವಾಹಕ ಅಧಿಕಾರಿ, ತಾಲೂಕ ಪಂಚಾಯತ ರಾಯಚೂರು ಇವರು ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ಅಕ್ಕಾ ಕೆಫೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ತೆರೆಯಲು ಕಟ್ಟಡ ಒದಗಿಸುವಂತೆ ಕುಲಸಚಿವರು ಇವರಿಗೆ ಪತ್ರದ ಮುಖೇನ (ಪತ್ರ ಸಂಖ್ಯೆ: ತಾಪಂರಾ/NRLM/ಅಕ್ಕಾಕೆಫೆ/ಕಂ/2025–26 ದಿನಾಂಕ 03.07.2025) ಕೋರಿರುತ್ತಾರೆ. ಅಲ್ಲದೇ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅನುಕೂಲವಾಗುವಂತೆ ಒಂದು ಸುಸಜ್ಜಿತ ಉಪಹಾರ ಗೃಹ (Cafeteria) ಕಟ್ಟಡದ ಅವಶ್ಯಕತೆ ಇರುತ್ತದೆ.

ಈ ವಿಷಯದ ಕುರಿತು ಚರ್ಚಿಸಲಾಗಿ ಸದರಿ ಕಟ್ಟಡ ನಿರ್ಮಿಸಲು ಅನುಮೋದಿಸಲಾಯಿತು. ಮುಂದುವರೆದು, ಸದರಿ ಉಪಹಾರ ಗೃಹ (Cafeteria) ಕಟ್ಟಡ ಕಾಮಗಾರಿಗೆ ತಗುಲುವ ಅಂದಾಜು ರೂ.125 ಲಕ್ಷಗಳ ವೆಚ್ಚವನ್ನು ಆರ್ಥಿಕ ಲಭ್ಯತೆಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸದರಿ ಕಾಮಗಾರಿಯನ್ನು 4ಜಿ ವಿನಾಯಿತಿ ಇರುವ ಏಜೆನ್ಸಿಯ ಬದಲಾಗಿ ಸರ್ಕಾರದ ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಕರೆಯುವ ಮೂಲಕ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು. ಅಕ್ಕ ಕೆಫೆಯನ್ನು ತೆರೆಯಲು ವಿಶ್ವವಿದ್ಯಾನಿಲಯವು ಅನುಮತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (10)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಂಚೆ ಕಚೇರಿ (Post Office) ಕಟ್ಟಡ ಮತ್ತು ಪೊಲೀಸ್ ಔಟ್‌ಪೋಸ್ಟ್ (Police Outpost) ಕಟ್ಟಡ ನಿರ್ಮಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಚರ್ಚಿಸಲಾಗಿ ಸದರಿ ಕಟ್ಟಡ ನಿರ್ಮಿಸಲು ಅನುಮೋದಿಸಲಾಯಿತು. ಮುಂದುವರೆದು, ಸದರಿ ಅಂಚೆ ಕಚೇರಿ (Post Office) ಕಟ್ಟಡ ಮತ್ತು ಪೊಲೀಸ್ ಔಟ್‌ಪೋಸ್ಟ್ (Police Outpost) ಕಟ್ಟಡ ಕಾಮಗಾರಿಗೆ ತಗುಲುವ ಅಂದಾಜು ರೂ. 25 ಲಕ್ಷಗಳ ವೆಚ್ಚವನ್ನು ಆರ್ಥಿಕ ಲಭ್ಯತೆಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಇಲ್ಲವಾದಲ್ಲಿ ಸರ್ಕಾರದ ಅಥವಾ ಇತರೆ ಸಂಸ್ಥೆ/ಮೂಲಗಳಿಂದ ಅಗತ್ಯ ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸದರಿ ಕಾಮಗಾರಿಯನ್ನು 4ಜಿ ವಿನಾಯಿತಿ ಇರುವ ಏಜೆನ್ಸಿಯ ಬದಲಾಗಿ ಸರ್ಕಾರದ ಕೆಟಿಪಿಪಿ ಕಾಯ್ದೆ ಅನುಸಾರ ಟೆಂಡರ್ ಕರೆಯುವ ಮೂಲಕ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಯಿತು.

... 6

**ವಿಷಯ ಕ್ರಮಾಂಕ (11)**

ವಿಶ್ವವಿದ್ಯಾನಿಲಯದ ಆವರಣದಲ್ಲಿ ದೈನಂದಿನ ಬಳಕೆಗಾಗಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾನಿಲಯಕ್ಕೆ ದೈನಂದಿನ ಬಳಕೆಗಾಗಿ ಮತ್ತು ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಜಿಲ್ಲಾ ಪಂಚಾಯತ್ ವತಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB), ಕಲಬುರಗಿ ವತಿಯಿಂದ ಅಥವಾ MLA/MP ಅವರ ಅನುದಾನದ ಅಡಿಯಲ್ಲಿ ಕಾಮಗಾರಿ ಕೈಗೊಳ್ಳಲು ಅಗತ್ಯ ಅನುದಾನವನ್ನು ಒದಗಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ ಕ್ರಮಾಂಕ (12)**

ಕೇಂದ್ರ ಸರ್ಕಾರದ RUSA ಅನುದಾನದ ಅಡಿಯಲ್ಲಿ ನಿರ್ಮಾಣಗೊಂಡ ಸಿದ್ರಾಂಪುರ ಗ್ರಾಮದ ಹತ್ತಿರದ ಸರ್ಕಾರಿ ಮಾದರಿ ಪದವಿ ಕಾಲೇಜು ಕಟ್ಟಡವನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ (University Constituent College) ಪಡೆಯುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿ ಸದರಿ ಸರ್ಕಾರಿ ಮಾದರಿ ಪದವಿ ಕಾಲೇಜು ಕಟ್ಟಡವನ್ನು ತಾತ್ಕಾಲಿಕವಾಗಿ ವಿಶ್ವವಿದ್ಯಾಲಯದ ಪರೀಕ್ಷೆ ಕಾರ್ಯಗಳಿಗೆ ಬಳಸಿಕೊಳ್ಳಲು ಸಂಬಂಧಿಸಿದ ಉನ್ನತ ಶಿಕ್ಷಣ ಇಲಾಖೆ ಮತ್ತು ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ ಕ್ರಮಾಂಕ (13)**

ವಿಶ್ವವಿದ್ಯಾನಿಲಯದ ಹಿಂದಿನ ಕುಲಪತಿಗಳಾದ ಪ್ರೊ. ಹರೀಶ್ ರಾಮಸ್ವಾಮಿ ಇವರ ಗಳಿಕೆ ರಜೆಯ ನಗದೀಕರಣ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ:**

ಈ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿ ಕೆಸಿಎಸ್ಆರ್ ಮತ್ತು ವಿಶ್ವವಿದ್ಯಾಲಯದ ನಿಯಮಾನುಸಾರ ಸದರಿಯವರ ಗಳಿಕೆ ರಜೆ ವೇತನವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದ ವತಿಯಿಂದ ಪಾವತಿಸಲು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ಕ್ರಮಾಂಕ (14)**

ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳ ಚರ್ಚೆ.

**ವಿಷಯ ಉಪಕ್ರಮಾಂಕ: 14(ಅ)**
ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ತು ನಿರ್ದೇಶಕರ ನೇಮಕಾತಿಯನ್ನು ಅನುಸಮರ್ಥಿಸುವ ಕುರಿತು.

**ಸಿಂಡಿಕೇಟ್ ಸಭೆಯ ನಿರ್ಣಯ**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಪರಿಷತ್ತು ಇದರ ನಿರ್ದೇಶಕರಾಗಿ ಈ ಹಿಂದೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ರಾಘವೇಂದ್ರ ಫತ್ತೇಪೂರ ಇವರು ತಮ್ಮ ರಾಜೀನಾಮೆಯನ್ನು ನೀಡಿರುವ ಪ್ರಯುಕ್ತ ಸದರಿ ಹುದ್ದೆಗೆ ಡಾ. ಸುಯಮೀಂದ್ರ ಕುಲಕರ್ಣಿ, ಸಹ ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದಿನಾಂಕ 03.07.2025 ರಂದು ನಡೆದ ಡೀನರ ಸಭೆಯ ನಿರ್ಣಯದಂತೆ ನೇಮಕ ಮಾಡಲಾಗಿರುತ್ತದೆ. ಕಾರಣ, ಸದರಿ ಅವರ ನೇಮಕಾತಿಯನ್ನು ಘಟನೋತ್ತರ ಅನುಮೋದನೆಗಾಗಿ ಸಭೆಯಲ್ಲಿ ಚರ್ಚಿಸಲಾಗಿ ಸರ್ವಾನುಮತದಿಂದ ಅನುಸಮರ್ಥಿಸಲಾಯಿತು.

**ವಿಷಯ ಉಪಕ್ರಮಾಂಕ: 14(ಬ)**
ದಿನಾಂಕ 23.06.2025 ರಂದು ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೈಗೊಂಡ ತುರ್ತು ಕಾಮಗಾರಿಗಳ ವೆಚ್ಚದ ಅನುಮೋದನೆ ಕುರಿತು.

ದಿನಾಂಕ 23.06.2025 ರಂದು ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾನಿಲಯಕ್ಕೆ ಸಮಾರಂಭದ ನಿಮಿತ್ತ ಭೇಟಿ ನೀಡಿ ಚಾಲನೆ ನೀಡಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕೆಲವು ಅನಿವಾರ್ಯ ಹಾಗೂ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು, ಹೆಲಿಪ್ಯಾಡ್ ನಿರ್ಮಾಣ, ವಿಶ್ವವಿದ್ಯಾನಿಲಯದ ಮುಖ್ಯದ್ವಾರದಿಂದ ಹೆಲಿಪ್ಯಾಡ್‌ವರೆಗೂ ಮತ್ತು ಆಡಳಿತ ಕಚೇರಿಯವರೆಗೆ ಸಂಪರ್ಕ ರಸ್ತೆ ಅಗಲೀಕರಣ ಮತ್ತು ಡಾಂಬರೀಕರಣ ಕಾಮಗಾರಿ, ಜಿಲ್ಲಾಧಿಕಾರಿಗಳ ಆದೇಶದಂತೆ ಊಟೋಪಚಾರ ಹೆಲಿಪ್ಯಾಡ್ ಕಾಮಗಾರಿಗೆ ಸಂಬಂಧಿಸಿದಂತೆ ಈಗಾಗಲೇ ಅಸ್ತಿತ್ವದಲ್ಲಿದ್ದ ವಿದ್ಯುತ್ ಕಂಬಗಳನ್ನು ಸ್ಥಳಾಂತರಗೊಳಿಸುವುದು, (Underground Cable, Vehicle Parking Stand, Food court, Shamiyan, ಊಟದ ವ್ಯವಸ್ಥೆ ಒಳಗೊಂಡಂತೆ) ಒಟ್ಟು ಹದಿನೈದು ಕಾಮಗಾರಿಗಳಿಗೆ ಒಟ್ಟು ಮೊತ್ತ ರೂ.35 ಲಕ್ಷಗಳು (GST ಹೊರತುಪಡಿಸಿ) ವೆಚ್ಚವಾಗಿರುತ್ತದೆ. ಕಾರಣ, ಸದರಿ ಕಾಮಗಾರಿಗಳ ವೆಚ್ಚವನ್ನು ವಿಶ್ವವಿದ್ಯಾನಿಲಯದ ಸ್ವಂತ ಅನುದಾನದಡಿ ಭರಿಸಲು ಘಟನೋತ್ತರ ಅನುಮೋದನೆ ನೀಡಲು ಸಭೆಯ ಮುಂದೆ ಕಾಮಗಾರಿವಾರು ಮಂಡಿಸಲಾಯಿತು. ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ಸಭೆಯು ಅನುಮೋದನೆ ನೀಡಿತು.

**ವಿಷಯ ಉಪಕ್ರಮಾಂಕ: 14(ಕ)**

ವಿಶ್ವವಿದ್ಯಾನಿಲಯದ ವಿವಿಧ ಉಪಸಮಿತಿಗಳನ್ನು ರಚಿಸುವ ಕುರಿತು.

... 8

ಸಿಂಡಿಕೇಟ್ ಸದಸ್ಯರಾದ ಶ್ರೀ ಡಿ. ಆರ್. ಚಿನ್ನ ಅವರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದಂತೆ ವಿಶ್ವವಿದ್ಯಾನಿಲಯದ ವಿವಿಧ ಕಾಮಗಾರಿಗಳಿಗೆ ಅಗತ್ಯವಿರುವ ಉಪಸಮಿತಿಗಳನ್ನು ರಚಿಸಲು ಚರ್ಚಿಸಿದರು. ಸದರಿ ಚರ್ಚೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ಉಪಸಮಿತಿಗಳನ್ನು ರಚಿಸಲು ಸರ್ವಾನುಮತದಿಂದ ಒಪ್ಪಲಾಯಿತು.

| ಕ್ರ. ಸಂ. | ಉಪಸಮಿತಿಯ ಹೆಸರು | ಸದಸ್ಯರ ಸಂಖ್ಯೆ |
|---|---|---|
| 1 | Estate Board Subcommittee | 03 (01 Syndicate Member, 01 Dean, 01 Expert) |
| 2 | Big Purchase Subcommittee | 03 (01 Syndicate Member, 01 Dean, 01 Finance Officer) |
| 3 | Finance Subcommittee | 03 (01 Syndicate Member, 01 Dean, 01 Expert) |
| 4 | Gymkhana Subcommittee | 03 (01 Syndicate Member, 01 Dean, 01 Expert) |
| 5 | Medical Bills Approval Subcommittee | 03 (01 Syndicate Member, 01 Dean, 01 Doctor) |

ಕೊನೆಯಲ್ಲಿ ಮಾನ್ಯ ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

17/7

**ಡಾ. ಚನ್ನಪ್ಪ ಎ.,**
ಕೆ.ಎ.ಎಸ್.
ಕುಲಸಚಿವರು
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು.

22/7/25

**ಡಾ. ಶಿವಾನಂದ ಕೆಳಗಿನಮನಿ**
ಕುಲಪತಿಗಳು
ಕುಲಪತಿಗಳು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು